**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 1762/2022**

**ಪ್ರಾ.ಸಾ.** 5

**ಚಾ.ಸಾ.** 8

**ದಿನಾಂಕಃ 12.04.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ರಾಯಪ್ಪ ಜಮಖಂಡಿ |
| ತಂದೆಃ ಗಂಡನ ಹೆಸರು | ಬಸಪ್ಪ |
| ಉದ್ಯೋಗ | ನಿವೃತ್ತ ವಲಯಅರಣ್ಯಾಧಿಕಾರಿ |
| ವಯಸ್ಸು | 68 ವರ್ಷ |
| ವಾಸಸ್ಥಳ | ಕಲಘಟಗಿ |

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ನಾನು 1985 ರಿಂದ 1989 ರವರೆಗೆ ಕಲಘಟಗಿಯಲ್ಲಿ ಅರಣ್ಯರಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 13.06.1986 ರಂದು ನಾನು ದುಮ್ಮವಾಡ ಅರಣ್ಯ ನಾಕಾದಲ್ಲಿದ್ದಾಗ ಬಂದ ಖಚಿತ ಮಾಹಿತಿ ಮೇರೆಗೆ  ಹಾಗೂ ಚಾಸಾ.1 ರ ಸೂಚನೆಯಂತೆ ನಾನು ಪಂಚರರಾದ ಚಾಸಾ.2 ಮತ್ತು 3 ರವರನ್ನು ಕರೆತಂದಿದ್ದು, ನಂತರ ನಾವು ಲಿಂಗನಕೊಪ್ಪದ ಅರಣ್ಯದ ದಾರಿಗೆ ಹೋಗಿದ್ದು, ಅಲ್ಲಿದ್ದ ಕೆರೆಯ ಹತ್ತಿರ ವಾಚ್ ಮಾಡುತ್ತಿದ್ದಾಗ ಅರಣ್ಯದಿಂದ 4 ಜನ ಕಟ್ಟಿಗೆ ಹೊರೆ ಒತ್ತಿಕೊಂಡು ಬರುವುದನ್ನು ನೋಡಿದ್ದು, ನಾವು ಅವರನ್ನು ಸುತ್ತುವರೆದು ವಿಚಾರಿಸಿದಾಗ ಅವರ ಹೆಸರು ಬಸಪ್ಪ, ಕೋನಪ್ಪ, ಮಾರುತಿ ಹಾಗೂ ಪೀರಸಾಬ ಎಂದು ಹೇಳಿದ್ದು, ಅವರು ಒಯ್ಯುತ್ತಿದ್ದ ಕಟ್ಟಿಗೆ ಪರಿಶೀಲಿಸಲಾಗಿ ಅವು ಶ್ರೀಗಂಧದ ಕಟ್ಟಿಗೆಗಳಾಗಿದ್ದವು.  ಆರೋಪಿತರ ಬಳಿ ಶ್ರೀಗಂಧದ ಕಟ್ಟಿಗೆ ಸಾಗಿಸಲು ಯಾವುದೇ ಪರ್ಮಿಟ್ ಇರಲಿಲ್ಲ. ಕೂಡಲೇ ಚಾಸಾ.1 ಹಾಗೂ ನಾನು ಉಳಿದ ಸಿಬ್ಬಂದಿ ಹಾಗೂ ಪಂಚರ ಸಮಕ್ಷಮ ಮಹಜರು ಮಾಡಿ ಆರೋಪಿತರ ವಶದಿಂದ ಒಟ್ಟು 27 ಗಂಧದ ಬಡ್ಡೆಗಳನ್ನು(97 ಕೆ ಜಿ) ವಶಪಡೆಸಿಕೊಂಡೆವು. ಸದರಿ ಮಹಜರು ನಿಪಿ1 ರಲ್ಲಿದ್ದು, ಕಟ್ಟಿಗೆಯ ವಿವರ ನಿಪಿ2 ರಲ್ಲಿದ್ದು ಸಾಕ್ಷಿ ಸಹಿ 1(ಇ) ಮತ್ತು 2(ಇ) ಎಂದು ಗುರುತಿಸಿದೆ.

ನಂತರ ಆರೋಪಿತರನ್ನು ವಿಚಾರಿಸಿದಾಗ ಅವರು ತಾವು ಶ್ರೀಗಂಧದ ಗಿಡಗಳ ಬಡ್ಡೆಗಳನ್ನು ತೆಗೆದುಕೊಂಡ ಜಾಗವನ್ನು ತೋರಿಸಿದರು. ನಂತರ ಮಾಲು ಹಾಗೂ ಆರೋಪಿತರೊಂದಿಗೆ ಠಾಣೆಗೆ ಬಂದಿದ್ದು, ಚಾಸಾ.1 ದೂರು ಸಲ್ಲಿಸಿರುತ್ತಾರೆ. ಆ ದಿನ ಶ್ರೀಗಂಧದ ಕಟ್ಟಿಗೆ ಕಳ್ಳಸಾಗಣೆ ಮಾಡುತ್ತಿದ್ದ ಆರೋಪಿತರ ಪೈಕಿ 4 ನೇ ಆರೋಪಿ ಪೀರಸಾಬ ಗಡದ ಎಂದು ನ್ಯಾಯಾಲಯದ ಮುಂದೆ ಇರುತ್ತಾನೆ.

**ಪಾಟೀ ಸವಾಲುಃ ಎಮ್ ಎನ್ ರವರಿಂದ ಆರೋಪಿತನ ಪರವಾಗಿ**

ಚಾಸಾ.1 ರವರು ನನ್ನ ಮೇಲಾಧಿಕಾರಿಗಳಾಗಿದ್ದರು ಅಂದರೆ ಸರಿ. ಆ ದಿನ ನಮಗೆ ಯಾವುದೇ ಮಾಹಿತಿ ಬಂದಿರಲಿಲ್ಲ ಅಂದರೆ ಸರಿಯಲ್ಲ. ನಾನು ಪಂಚರನ್ನು ಕರೆತಂದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹೇಳಿದಂತೆ ಆ ದಿನ ನ್ಯಾಯಾಲಯದ ಮುಂದಿರುವ ಆರೋಪಿ ಯಾವುದೇ ಶ್ರೀಗಂಧದ ಕಟ್ಟಿಗಳನ್ನು ಸಾಗಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಘಟನೆಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ. ನಾವು ಆ ದಿನ ಯಾವುದೇ ಮಹಜರು ಮಾಡಿಲ್ಲ, ಯಾವುದೇ ಕಟ್ಟಿಗೆ ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ವಶಪಡಿಸಿಕೊಂಡ ಕಟ್ಟಿಗೆಗಳ ಹಾಗೂ ಗಿಡ ಕಡಿದ ಜಾಗದ ಪೋಟೋ ತೆಗೆದಿಲ್ಲ. ಆರೋಪಿತರು ತಾವು ಮರ ಕಡಿದ ಸ್ಥಳ ತೋರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಇಲಾಖಾ ಅಂಕಿ ಸಂಖ್ಯೆಗೋಸ್ಕರ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ, ಇಲಾಖಾ ದಾಸ್ತಾನಿಂದ ಕಟ್ಟಿಗೆಗಳನ್ನು ತೋರಿಸಿ, ಚಾಸಾ.1 ನಮ್ಮ ಮೇಲಾಧಿಕಾರಿಗಳಾಗಿರುವುದರಿಂದ ಅವರ ಮಾತು ಕೇಳಿ ಆರೋಪಿತನ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**
(ತೆರೆದ ನ್ಯಾಯಾಲಯದಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**
**ಸಿ ಸಿ ನಂ. 1762/2022**

**ಪ್ರಾ.ಸಾ.** 4
**ಚಾ.ಸಾ.** 7

**ದಿನಾಂಕಃ 12.04.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಶ್ರೀಧರ ಮಡಿವಾಳ |
| ತಂದೆಃ ಗಂಡನ ಹೆಸರು | ಪರಮೇಶ್ವರ |
| ಉದ್ಯೋಗ | ನಿವೃತ್ತ ವಲಯಅರಣ್ಯಾಧಿಕಾರಿ |
| ವಯಸ್ಸು | 64 ವರ್ಷ |
| ವಾಸಸ್ಥಳ | ಕುಮಟಾ |

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ನಾನು 1984 ರಿಂದ 1988 ರವರೆಗೆ ಕಲಘಟಗಿಯಲ್ಲಿ ಅರಣ್ಯರಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 13.06.1986 ರಂದು ನಾನು ದುಮ್ಮವಾಡ ಅರಣ್ಯ ನಾಕಾದಲ್ಲಿದ್ದಾಗ ಬಂದ ಖಚಿತ ಮಾಹಿತಿ ಮೇರೆಗೆ ನಾನು ಹಾಗೂ ಚಾಸಾ.5 ಇತರೆ ಸಿಬ್ಬಂದಿಯೊಂದಿಗೆ ಹಾಗೂ ಪಂಚರನ್ನು ಒಳಗೊಂಡು ಲಿಂಗನಕೊಪ್ಪದ ಅರಣ್ಯದ ದಾರಿಗೆ ಹೋಗಿದ್ದು, ಅಲ್ಲಿದ್ದ ಕೆರೆಯ ಹತ್ತಿರ ವಾಚ್ ಮಾಡುತ್ತಿದ್ದಾಗ ಅರಣ್ಯದಿಂದ 4 ಜನ ಕಟ್ಟಿಗೆ ಹೊರೆ ಒತ್ತಿಕೊಂಡು ಬರುವುದನ್ನು ನೋಡಿದ್ದು, ನಾವು ಅವರನ್ನು ಸುತ್ತುವರೆದು ವಿಚಾರಿಸಿದಾಗ ಅವರ ಹೆಸರು ಬಸಪ್ಪ, ಕೋನಪ್ಪ, ಮಾರುತಿ ಹಾಗೂ ಪೀರಸಾಬ ಎಂದು ಹೇಳಿದ್ದು, ಅವರು ಒಯ್ಯುತ್ತಿದ್ದ ಕಟ್ಟಿಗೆ ಪರಿಶೀಲಿಸಲಾಗಿ ಅವು ಶ್ರೀಗಂಧದ ಕಟ್ಟಿಗೆಗಳಾಗಿದ್ದವು. ಆರೋಪಿತರ ಬಳಿ ಶ್ರೀಗಂಧದ ಕಟ್ಟಿಗೆ ಸಾಗಿಸಲು ಯಾವುದೇ ಪರ್ಮಿಟ್ ಇರಲಿಲ್ಲ. ಕೂಡಲೇ ಚಾಸಾ.1 ಹಾಗೂ ನಾನು ಉಳಿದ ಸಿಬ್ಬಂದಿ ಹಾಗೂ ಪಂಚರ ಸಮಕ್ಷಮ ಮಹಜರು ಮಾಡಿ ಆರೋಪಿತರ ವಶದಿಂದ ಒಟ್ಟು 27 ಗಂಧದ ಬಡ್ಡೆಗಳನ್ನು(97 ಕೆ ಜಿ) ವಶಪಡಿಸಿಕೊಂಡೆವು. ಸದರಿ ಮಹಜರು ನಿಪಿ1 ರಲ್ಲಿದ್ದು, ಕಟ್ಟಿಗೆಯ ವಿವರ ನಿಪಿ2 ರಲ್ಲಿದ್ದು ಸಾಕ್ಷಿ ಸಹಿ 1(ಡಿ) ಮತ್ತು 2(ಡಿ) ಎಂದು ಗುರುತಿಸಿದೆ.

ನಂತರ ಆರೋಪಿತರನ್ನು ವಿಚಾರಿಸಿದಾಗ ಅವರು ತಾವು ಶ್ರೀಗಂಧದ ಗಿಡಗಳ ಬಡ್ಡೆಗಳನ್ನು ತೆಗೆದುಕೊಂಡ ಜಾಗವನ್ನು ತೋರಿಸಿದರು. ನಂತರ ಮಾಲು ಹಾಗೂ ಆರೋಪಿತರೊಂದಿಗೆ ಠಾಣೆಗೆ ಬಂದಿದ್ದು, ಚಾಸಾ.1 ದೂರು ಸಲ್ಲಿಸಿರುತ್ತಾರೆ. ಆ ದಿನ ಶ್ರೀಗಂಧದ ಕಟ್ಟಿಗೆ ಕಳ್ಳಸಾಗಣೆ ಮಾಡುತ್ತಿದ್ದ ಆರೋಪಿತರ ಪೈಕಿ 4 ನೇ ಆರೋಪಿ ಪೀರಸಾಬ ಗಡದ ಎಂದು ನ್ಯಾಯಾಲಯದ ಮುಂದೆ ಇರುತ್ತಾನೆ.

**ಪಾಟೀ ಸವಾಲುಃ ಎಮ್ ಎನ್ ರವರಿಂದ ಆರೋಪಿತನ ಪರವಾಗಿ**

ಚಾಸಾ.1 ರವರು ನನ್ನ ಮೇಲಾಧಿಕಾರಿಗಳಾಗಿದ್ದರು ಅಂದರೆ ಸರಿ. ಆ ದಿನ ನಮಗೆ ಯಾವುದೇ ಮಾಹಿತಿ ಬಂದಿರಲಿಲ್ಲ ಅಂದರೆ ಸರಿಯಲ್ಲ. ನಾನು ಹೇಳಿದಂತೆ ಆ ದಿನ ನ್ಯಾಯಾಲಯದ ಮುಂದಿರುವ ಆರೋಪಿ ಯಾವುದೇ ಶ್ರೀಗಂಧದ ಕಟ್ಟಿಗಳನ್ನು ಸಾಗಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಘಟನೆಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ. ನಾವು ಆ ದಿನ ಯಾವುದೇ ಮಹಜರು ಮಾಡಿಲ್ಲ, ಯಾವುದೇ ಕಟ್ಟಿಗೆ ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ವಶಪಡಿಸಿಕೊಂಡ ಕಟ್ಟಿಗೆಗಳ ಹಾಗೂ ಗಿಡ ಕಡಿದ ಜಾಗದ ಪೋಟೋ ತೆಗೆದಿಲ್ಲ. ಆರೋಪಿತರು ತಾವು ಮರ ಕಡಿದ ಸ್ಥಳ ತೋರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಇಲಾಖಾ ಅಂಕಿ ಸಂಖ್ಯೆಗೋಸ್ಕರ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ, ಇಲಾಖಾ ದಾಸ್ತಾನಿಂದ ಕಟ್ಟಿಗೆಗಳನ್ನು ತೋರಿಸಿ, ಚಾಸಾ.1 ನಮ್ಮ ಮೇಲಾಧಿಕಾರಿಗಳಾಗಿರುವುದರಿಂದ ಅವರ ಮಾತು ಕೇಳಿ ಆರೋಪಿತನ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**
(ತೆರೆದ ನ್ಯಾಯಾಲಯದಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 1762/2022**

**ಪ್ರಾ.ಸಾ.** 3

**ಚಾ.ಸಾ.** 5

**ದಿನಾಂಕಃ 12.04.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಚೆನ್ನಪ್ಪ ಅಮ್ಮನವರ |
| ತಂದೆಃ ಗಂಡನ ಹೆಸರು | ಮಲ್ಲಿಕಾರ್ಜುನಪ್ಪ |
| ಉದ್ಯೋಗ | ನಿವೃತ್ತ ಉಪಅರಣ್ಯ ಸಂರಕ್ಷಣಾಧಿಕಾರಿ |
| ವಯಸ್ಸು | 67 ವರ್ಷ |
| ವಾಸಸ್ಥಳ | ಧಾರವಾಡ |

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ನಾನು ದಿಃ 15.05.1986 ರಿಂದ ಜೂನ್ 1989 ರವರೆಗೆ ಕಲಘಟಗಿಯಲ್ಲಿ ವಲಯ ಅರಣ್ಯಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 13.06.1986 ರಂದು ಬಂದ ಖಚಿತ ಬಾತ್ಮಿ ಮೇರೆಗೆ ನಾನು ಹಾಗೂ ಚಾಸಾ.1 ದುಮ್ಮವಾಡ ನಾಕಕ್ಕೆ ಹೋಗಿದ್ದು, ಅಲ್ಲಿ ನಮ್ಮ ಇತರೆ ಸಿಬ್ಬಂದಿಯನ್ನು ಕರೆಸಿಕೊಂಡು, ಚಾಸಾ.2 ಮತ್ತು 3 ರವರನ್ನು ಬರಮಾಡಿಕೊಂಡು ಲಿಂಗನಕೊಪ್ಪದ ಅರಣ್ಯದ ದಾರಿಗೆ ಹೋಗಿದ್ದು, ಅಲ್ಲಿದ್ದ ಕೆರೆಯ ಹತ್ತಿರ ನಾವು ಬೆಳಗಿನ ಜಾವ 05.00 ರ ಸಮಯದಲ್ಲಿ ಹೋದೆವು. ಅಲ್ಲಿ ನಾವು ವಾಚ್ ಮಾಡುತ್ತಿದ್ದಾಗ ಅರಣ್ಯದಿಂದ 4 ಜನ ಕಟ್ಟಿಗೆ ಹೊರೆ ಒತ್ತಿಕೊಂಡು ಬರುವುದನ್ನು ನೋಡಿದ್ದು, ನಾವು ಅವರನ್ನು ಸುತ್ತುವರೆದು ವಿಚಾರಿಸಿದಾಗ ಅವರ ಹೆಸರು ಬಸಪ್ಪ, ಕೋನಪ್ಪ, ಮಾರುತಿ ಹಾಗೂ ಪೀರಸಾಬ ಎಂದು ಹೇಳಿದ್ದು, ಅವರು ಒಯ್ಯುತ್ತಿದ್ದ ಕಟ್ಟಿಗೆ ಪರಿಶೀಲಿಸಲಾಗಿ ಅವು ಶ್ರೀಗಂಧದ ಕಟ್ಟಿಗೆಗಳಾಗಿದ್ದವು. ಆರೋಪಿತರ ಬಳಿ ಶ್ರೀಗಂಧದ ಕಟ್ಟಿಗೆ ಸಾಗಿಸಲು ಯಾವುದೇ ಪರ್ಮಿಟ್ ಇರಲಿಲ್ಲ. ಕೂಡಲೇ ಚಾಸಾ.1 ಹಾಗೂ ನಾನು ಉಳಿದ ಸಿಬ್ಬಂದಿ ಹಾಗೂ ಪಂಚರ ಸಮಕ್ಷಮ ಮಹಜರು ಮಾಡಿ ಆರೋಪಿತರ ವಶದಿಂದ ಒಟ್ಟು 27 ಗಂಧದ ಬಡ್ಡೆಗಳನ್ನು(97 ಕೆ ಜಿ) ವಶಪಡಿಸಿಕೊಂಡೆವು. ಸದರಿ ಮಹಜರು ನಿಪಿ1 ರಲ್ಲಿದ್ದು, ಕಟ್ಟಿಗೆಯ ವಿವರ ನಿಪಿ2 ರಲ್ಲಿದ್ದು ಸಾಕ್ಷಿ ಸಹಿ 1(ಸಿ) ಮತ್ತು 2(ಸಿ) ಎಂದು ಗುರುತಿಸಿದೆ.

ನಂತರ ಆರೋಪಿತರನ್ನು ವಿಚಾರಿಸಿದಾಗ ಅವರು ತಾವು ಶ್ರೀಗಂಧದ ಗಿಡಗಳ ಬಡ್ಡೆಗಳನ್ನು ತೆಗೆದುಕೊಂಡ ಜಾಗವನ್ನು ತೋರಿಸಿದರು. ಸದರಿ ಸ್ಥಳ ಲಿಂಗನಕೊಪ್ಪ ಮೀಸಲು ಅರಣ್ಯದ ಬ್ಲಾಕ ನಂ.1, ಕೂಪ ನಂ.36, ಸ.ನಂ.40 ಆಗಿತ್ತು. ನಂತರ ಮಾಲು ಹಾಗೂ ಆರೋಪಿತರೊಂದಿಗೆ ಠಾಣೆಗೆ ಬಂದಿದ್ದು, ಚಾಸಾ.1 ದೂರು ಸಲ್ಲಿಸಿರುತ್ತಾರೆ. ನಂತರ ಮೇಲಾಧಿಕಾರಿಗಳ ಸೂಚನೆಯಂತೆ ವಶಪಡಿಸಿಕೊಂಡ ಕಟ್ಟಿಗೆಗಳನ್ನು ಹರಾಜು ಮಾಡಲಾಯಿತು. ಆ ದಿನ ಶ್ರೀಗಂಧದ ಕಟ್ಟಿಗೆ ಕಳ್ಳಸಾಗಣೆ ಮಾಡುತ್ತಿದ್ದ ಆರೋಪಿತರ ಪೈಕಿ 4 ನೇ ಆರೋಪಿ ಪೀರಸಾಬ ಗಡದ ಎಂದು ನ್ಯಾಯಾಲಯದ ಮುಂದೆ ಇರುತ್ತಾನೆ.

**ಪಾಟೀ ಸವಾಲುಃ ಎಮ್ ಎನ್ ರವರಿಂದ ಆರೋಪಿತನ ಪರವಾಗಿ**

ನಮಗೆ ಮಾಹಿತಿ ನೀಡಿದವರು ಆರೋಪಿತರ ಚಹರೆ ಪಟ್ಟಿಯ ಬಗ್ಗೆ ಹೇಳಿಲ್ಲ. ಆ ಸಮಯದಲ್ಲಿ ನಾನು ಕಲಘಟಗಿಯ ಕೇಂದ್ರ ಸ್ಥಾನದಲ್ಲಿದ್ದು, ಚಾಸಾ.1 ದುಮ್ಮವಾಡ ಕಚೇರಿಯಲ್ಲಿ ಕರ್ತವ್ಯದಲ್ಲಿದ್ದರು. ಕಲಘಟಗಿಯಿಂದ ದುಮ್ಮವಾಡ 15-16 ಕಿ ಮೀ ದೂರದಲ್ಲಿದೆ. ಪಂಚರನ್ನು ನಮ್ಮ ಸಿಬ್ಬಂದಿ ಚಾಸಾ.8 ರವರು ಕರೆತಂದರು.  ನಾನು ಹೇಳಿದಂತೆ ಆ ದಿನ ನ್ಯಾಯಾಲಯದ ಮುಂದಿರುವ ಆರೋಪಿ ಯಾವುದೇ ಶ್ರೀಗಂಧದ ಕಟ್ಟಿಗಳನ್ನು ಸಾಗಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಘಟನೆಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ. ನಾವು ಆ ದಿನ ಯಾವುದೇ ಮಹಜರು ಮಾಡಿಲ್ಲ, ಯಾವುದೇ ಕಟ್ಟಿಗೆ ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ವಶಪಡಿಸಿಕೊಂಡ ಕಟ್ಟಿಗೆಗಳ ಹಾಗೂ ಗಿಡ ಕಡಿದ ಜಾಗದ ಪೋಟೋ ತೆಗೆದಿಲ್ಲ. ಸದರಿ ಕಟ್ಟಿಗೆಗಳನ್ನು ಹರಾಜು ಮಾಡುವ ಮೊದಲು ಸಕ್ಷಮ ನ್ಯಾಯಾಲಯದಿಂದ ಅನುಮತಿ ಪಡೆದಿಲ್ಲ ಅಂದರೆ ಸರಿಯಲ್ಲ. ಆರೋಪಿತರು ತಾವು ಮರ ಕಡಿದ ಸ್ಥಳ ತೋರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಇಲಾಖಾ ಅಂಕಿ ಸಂಖ್ಯೆಗೋಸ್ಕರ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ, ಇಲಾಖಾ ದಾಸ್ತಾನಿಂದ ಕಟ್ಟಿಗೆಗಳನ್ನು ತೋರಿಸಿ, ಆರೋಪಿತನ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**
(ತೆರೆದ ನ್ಯಾಯಾಲಯದಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 1762/2022**

**ಪ್ರಾ.ಸಾ.** 2

**ಚಾ.ಸಾ.** 3

**ದಿನಾಂಕಃ 12.04.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಗಂಗಪ್ಪ ಬರಿಗಲ್ |
| ತಂದೆಃ ಗಂಡನ ಹೆಸರು | ಬಾಳಪ್ಪ |
| ಉದ್ಯೋಗ | ವ್ಯವಸಾಯ |
| ವಯಸ್ಸು | 70 ವರ್ಷ |
| ವಾಸಸ್ಥಳ | ದುಮ್ಮವಾಡ |

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ಈಗ ನೋಡುತ್ತಿರುವ ನಿಪಿ1 ಮತ್ತು 2 ರಲ್ಲಿ ಸಾಕ್ಷಿ ಸಹಿ ಗುರುತಿಸಿದ್ದು, ಸದರಿ ಸಹಿಗಳನ್ನು 1(ಬಿ), 2(ಬಿ) ಎಂದು ಗುರುತಿಸಿದೆ. ಸದರಿ ಸಹಿಗಳನ್ನು ಸುಮಾರು 30-35 ವರುಷಃಗಳ ಹಿಂದೆ ಪೊಲೀಸರ ವಿನಂತಿಯ ಮೇರೆಗೆ ಮಾಡಿದ್ದು, ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ, ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಹಿಂದೆ ಯಾವ ಕಾಲಕ್ಕೂ ನೋಡಿಲ್ಲ.

(ಈ ಹಂತದಲ್ಲಿ ಎಪಿಪಿ ರವರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿಸಿದೆ.)

**ಪಾಟೀ ಸವಾಲುಃ ಎಪಿಪಿ ರವರಿಂದ**

ದಿಃ13.06.1986 ರಂದು ಬೆಳಿಗೆ 6.00 ರ ಸಮಯದಲ್ಲಿ ಪೋಲೀಸರು ನನ್ನನ್ನು ಮತ್ತು ಚಾಸಾ.3 ರವರನ್ನು ಲಿಂಗನಕೊಪ್ಪದಿಂದ ಅರಣ್ಯಕ್ಕೆ ಹೋಗುವ ದಾರಿಯ ಹತ್ತಿರ ಕರೆದು ನಮ್ಮ ಸಮಕ್ಷಮ ನಿಪಿ1 ರಂತೆ ಮಹಜರು ಮಾಡಿ, ಆರೋಪಿತನ ವಶದಿಂದ 27 ಗಂಧದ ಕಟ್ಟಿಗೆ ಬುರ್ಚಿಗಳನ್ನು (ಒಟ್ಟು 97 ಕೆ ಜಿ ) ವಶಪಡಿಸಿಕೊಂಡು, ನಿಪಿ2 ರಂತೆ ಕಟ್ಟಿಗೆಯ ವಿವರವನ್ನು ಬರೆದು ನಮ್ಮ ಸಹಿ ಪಡೆದಿದ್ದಾರೆ ಅಂದರೆ ಸರಿಯಲ್ಲ. ನಂತರ ಲಿಂಗನಕೊಪ್ಪ ರಕ್ಷಿತ ಅರಣ್ಯದಲ್ಲಿ ನಮ್ಮನ್ನು ಕರೆದುಕೊಂಡು ಹೋಗಿದ್ದು, ಆರೋಪಿ

ತಾನು ಗಂಧದ ಬುರ್ಚಿಗಳನ್ನು ಕತ್ತರಿಸಿಕೊಂಡ ಜಾಗ ತಾನೇ ತೋರಿಸಿದನು ಅಂದರೆ ಸರಿಯಲ್ಲ. ಸದರಿ ವಿಷಯವನ್ನು ಮಹಜರನಲ್ಲಿ ಬರೆಯಲಾಗಿದೆ ಅಂದರೆ ಸರಿಯಲ್ಲ. ನನಗೆ ಮಹಜರು ಹಾಗೂ ಕಟ್ಟಿಗೆ ವಶಪಡಿಸಿಕೊಂಡ ವಿಷಯದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**
(ತೆರೆದ ನ್ಯಾಯಾಲಯದಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 1762/2022**

**ಪ್ರಾ.ಸಾ.** 1

**ಚಾ.ಸಾ.** 2

**ದಿನಾಂಕಃ 12.04.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಮಂಜುನಾಥ ಸವದತ್ತಿ |
| ತಂದೆಃ ಗಂಡನ ಹೆಸರು | ಜಿನ್ನಪ್ಪ |
| ಉದ್ಯೋಗ | ವ್ಯವಸಾಯ |
| ವಯಸ್ಸು | 59 ವರ್ಷ |
| ವಾಸಸ್ಥಳ | ದುಮ್ಮವಾಡ |

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ಈಗ ನೋಡುತ್ತಿರುವ ದಾಖಲೆಯಲ್ಲಿ ಸಾಕ್ಷಿ ಸಹಿ ಗುರುತಿಸಿದ್ದು, ಸದರಿ ಮಹಜರ ನಿಪಿ1 ಎಂದು, ಕಟ್ಟಿಗೆಗಳ ಅಳತೆ ವಿವರ ನಿಪಿ2 ಎಂದು, ಸಾಕ್ಷಿ ಸಹಿ 1(ಎ), 2(ಎ) ಎಂದು ಗುರುತಿಸಿದೆ. ಸದರಿ ಸಹಿಗಳನ್ನು ಸುಮಾರು 30-35 ವರುಷಃಗಳ ಹಿಂದೆ ಪೊಲೀಸರ ವಿನಂತಿಯ ಮೇರೆಗೆ ಮಾಡಿದ್ದು, ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ, ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಹಿಂದೆ ಯಾವ ಕಾಲಕ್ಕೂ ನೋಡಿಲ್ಲ.

(ಈ ಹಂತದಲ್ಲಿ ಎಪಿಪಿ ರವರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿಸಿದೆ.)

**ಪಾಟೀ ಸವಾಲುಃ ಎಪಿಪಿ ರವರಿಂದ**

ದಿಃ13.06.1986 ರಂದು ಬೆಳಿಗೆ 6.00 ರ ಸಮಯದಲ್ಲಿ ಪೋಲೀಸರು ನನ್ನನ್ನು ಮತ್ತು ಚಾಸಾ.3 ರವರನ್ನು ಲಿಂಗನಕೊಪ್ಪದಿಂದ ಅರಣ್ಯಕ್ಕೆ ಹೋಗುವ ದಾರಿಯ ಹತ್ತಿರ ಕರೆದು ನಮ್ಮ ಸಮಕ್ಷಮ ನಿಪಿ1 ರಂತೆ ಮಹಜರು ಮಾಡಿ, ಆರೋಪಿತನ ವಶದಿಂದ 27 ಗಂಧದ ಕಟ್ಟಿಗೆ ಬುರ್ಚಿಗಳನ್ನು (ಒಟ್ಟು 97 ಕೆ ಜಿ ) ವಶಪಡಿಸಿಕೊಂಡು, ನಿಪಿ2 ರಂತೆ ಕಟ್ಟಿಗೆಯ ವಿವರವನ್ನು ಬರೆದು ನಮ್ಮ ಸಹಿ ಪಡೆದಿದ್ದಾರೆ ಅಂದರೆ ಸರಿಯಲ್ಲ. ನಂತರ ಲಿಂಗನಕೊಪ್ಪ ರಕ್ಷಿತ ಅರಣ್ಯದಲ್ಲಿ ನಮ್ಮನ್ನು ಕರೆದುಕೊಂಡು ಹೋಗಿದ್ದು, ಆರೋಪಿ

ತಾನು ಗಂಧದ ಬುರ್ಚಿಗಳನ್ನು ಕತ್ತರಿಸಿಕೊಂಡ ಜಾಗ ತಾನೇ ತೋರಿಸಿದನು ಅಂದರೆ ಸರಿಯಲ್ಲ. ಸದರಿ ವಿಷಯವನ್ನು ಮಹಜರನಲ್ಲಿ ಬರೆಯಲಾಗಿದೆ ಅಂದರೆ ಸರಿಯಲ್ಲ. ನನಗೆ ಮಹಜರು ಹಾಗೂ ಕಟ್ಟಿಗೆ ವಶಪಡಿಸಿಕೊಂಡ ವಿಷಯದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**